## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 24-08-2022.

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧಗಳ ಸಂಖ್ಯೆ 129/2022 ಕಲಂ 454, 457, 380 ಐಪಿಸಿ :-

ದಿನಾಂಕ 24/08/2022 ರಂದು 1800 ಗಂಟೆಗೆ ಫಿರ್ಯಾದಿ ಶ್ರೀ ವಿರೇಶ ಪಾಟೀಲ ತಂದೆ ರಾಜಶೇಖರ ವಯ-28 ವರ್ಷ ಜಾ: ಲಿಂಗಾಯತ ಉ: ಸಿ.ಇ.ಓ ಅಂತಾ ಸಾ: ಎಲ್.ಐ.ಜಿ. ಹೌಸಿಂಗ ಬೋರ್ಡ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರು ನೀಡಿದ ಸಾರಾಂಶವೆನೆಂದರೆ ಫಿರ್ಯಾದಿರವರು ಕಳೆದ 09 ತಿಂಗಳಿಂದ ಬೀದರ ಗಾಂಧಿಗಂಜ ದಲ್ಲಿರುವ ಬೀದರ ಹರ್ಟಿಕಲ್ಚರ ಫಾರ್ಮರ ಪ್ರೋಡಿಸರ ಕಂಪನಿ ಫರ್ಟಿಲೈಜರ ಅಂಗಡಿಯಲ್ಲಿ ಸಿ.ಇ.ಓ ಅಂತಾ ಕೇಲಸ ಮಾಡುತ್ತಿದ್ದು ದಿನಾಂಕ 23/08/2022 ರಂದು ರಾತ್ರಿ 1030 ಗಂಟೆಗೆ ಫಿರ್ಯಾದಿ ಮತ್ತು ಅಂಗಡಿಯಲ್ಲಿ ಕೆಲಸ ಮಾಡುವ ಹಣಮಂತ ಸಿರಗಾಪುರೆ ಇಬ್ಬರು ಕೂಡಿ ಅಂಗಡಿ ಬಂದ್ ಮಾಡಿ ಅಂಗಡಿಗೆ ಕೀಲಿ ಹಾಕಿ ಮನೆಗೆ ಹೋಗಿದ್ದು ದಿನಾಂಕ 24/08/2022 ರಂದು ಮುಂಜಾನೆ 1000 ಗಂಟೆಗೆ ಅಂಗಡಿ ತೆರೆಯಬೆಕೆಂದು ಗಾಂಧಿಗಂಜಿಗೆ ಬಂದಾಗ ನಮ್ಮ ಅಂಗಡಿಯ ಟೀನ ಶೇಡ ಮುರಿದಿದ್ದನ್ನು ನೋಡಿ ಗಾಬರಿಗೊಂಡು ಅಂಗಡಿಯಲ್ಲಿ ಒಳಗೆ ಹೊಗಿ ನೋಡಲಾಗಿ ಅಂಗಡಿಯ ಗಲ್ಲಾ ಕೌಂಟರ ಕೀಲಿ ಮುರಿದಿದ್ದು ಗಲ್ಲಾದಲ್ಲಿರುವ ಗಿರಾಕಿ ಮಾಡಿದ ನಗದು ಹಣ 133000=00 ರೂಪಾಯಿ ಕಳವು ಆಗಿರುತ್ತವೆ. ದಿನಾಂಕ 23/08/2022 ರಂದು ರಾತ್ರಿ 1030 ಗಂಟೆಯಿಂದ ದಿನಾಂಕ 24/08/2022 ರಂದು ಮುಂಜಾನೆ 1000 ಗಂಟೆಯ ಅವಧಿಯಲ್ಲಿ ಯಾರೊ ಕಳ್ಳರು ಒಳಗೆ ಪ್ರವೇಶಿಸಿ ಕೌಂಟರ ಗಲ್ಲಾ ಕೀಲಿ ಮುರಿದು ಗಲ್ಲಾದಲ್ಲಿರುವ ನಗದು ರೂಪಾಯಿ 133000=00 ಹಣ ಕಳವು ಮಾಡಿಕೊಂಡು ಹೊಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹುಲಸೂರ ಪೊಲೀಸ ಠಾಣೆ ಅಪರಾಧ ಸಂಖ್ಯೆ 56/2022 ಕಲಂ 3 & 7 ಇಸಿ ಕಾಯ್ದೆ :-

ದಿನಾಂಕ 24/08/2022 ರಂದು 1500 ಗಂಟೆಗೆ ಫಿರ್ಯಾದಿ ಶ್ರೀ ಪ್ರದೀಪ ತಂದೆ ಸಿದ್ರಾಮಪ್ಪಾ ಮಸಗಲೆ ವಯಸ್ಸು 40 ವರ್ಷ ಜಾತಿ ಲಿಂಗಾಯತ ಉದ್ಯೋಗ ಆಹಾರ ನಿರೀಕ್ಷಕರು ಹುಲಸೂರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ದಿನಾಂಕ 24/08/2022 ರಂದು ಮುಂಜಾನೆ 0900 ಗಂಟೆಗೆ ಖಚಿತವಾದ ಮಾಹಿತಿ ಬಂದಿದ್ದೆನೆಂದರೆ, ಸಾರ್ವಜನಿಕ ವಿತರಣ ಪದ್ದತಿ (ಪಿ.ಡಿ.ಎಸ್) ಅಡಿಯಲ್ಲಿ ಸರಬರಾಜು ಮಾಡುವ ಅಕ್ಕಿ ಅಕ್ರಮವಾಗಿ ಹುಲಸೂರ ದಿಂದ ಶಹಾಜನಿ ಔರಾದ ಕಡೆಗೆ ಮಹೀಂದ್ರಾ ಗೂಡ್ಸ್ ವಾಹನದಲ್ಲಿ ಸಾಗಾಟ ಮಾಡುತ್ತಿದ್ದಾರೆಂದು ಖಚಿತವಾದ ಮಾಹಿತಿ ಬಂದ ಮೇರೆಗೆ ಬಸವೇಶ್ವರ ಚೌಕ ಹತ್ತಿರ ಇಂದು 10:40 ಗಂಟೆಗೆ ಎಲ್ಲರೂ ನಿಂತುಕೊಂಡು ಕಾಯುತ್ತಾ ನಿಂತಿರುವಾಗ 11:00 ಗಂಟೆಗೆ ಹುಲಸೂರ ಕಡೆಯಿಂದ ಒಂದು ಮಹಿಂದ್ರಾ ಪಿಕಪ್ ಗೂಡ್ಸ್ ವಾಹನ ಬರುತ್ತಿರುವುದು ಗಮನಿಸಿ ವಾಹನವನ್ನು ನಿಲ್ಲಿಸಿ ಮಹಿಂದ್ರಾ ಪಿಕಪ್ ಗೂಡ್ಸ್ ವಾಹನದ ನಂಬರ ನೋಡಲಾಗಿ ಎಮ್‍ಎಚ್-24, ಎಯು-6455 ನೇದು ಇರುತ್ತದೆ. ಚಾಲಕನ ಹೆಸರು ಮತ್ತು ವಿಳಾಸ ವಿಚಾರಿಸಲು ತಾನಾಜಿ ತಂದೆ ಶೇಷಿರಾವ ಇಂಗಳೆ ವಯಸ್ಸು 25 ವರ್ಷ, ಜಾತಿ ಮರಾಠಾ, ಉದ್ಯೋಗ ಚಾಲಕ ಕೆಲಸ ಸಾ: ಹತ್ತರಗಾ ತಾ: ನೀಲಂಗಾ ಜಿ: ಲಾತೂರ ಮತ್ತು ಆತನ ಜೊತೆಯಲ್ಲಿದ್ದ ಇನ್ನೊಬ ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಲು ಮಹ್ಮದ ಉಸ್ಮಾನ @ ಹುಸೇನ ತಂದೆ ಮಕ್ದೂಮ ಫಕೀರ ವಯಸ್ಸು 28 ವರ್ಷ, ಜಾತಿ ಮುಸ್ಲಿಂ, ಉದ್ಯೋಗ ಹಮಾಲ ಕೆಲಸ ಸಾ: ಕಾಸರ ಸಿರ್ಸಿ, ತಾ: ನೀಲಂಗಾ ಜಿ: ಲಾತೂರ ಅಂತ ತಿಳಿಸಿರುತ್ತಾರೆ. ಅಕ್ಕಿ ಎಲ್ಲಿಂದ ತರುತ್ತಿರುವುದಾಗಿ ವಿಚಾರಿಸಲು ಸದರಿ ಅಕ್ಕಿಯನ್ನು ಸಲಿಂ ಬಾಗವಾನ ಉದ್ಯೋಗ ಭೂಸಾರ ವ್ಯಾಪಾರ ಸಾ: ಕಾಸರ ಸಿರ್ಸಿ ಈತನು ನನಗೆ ಹುಲಸೂರ ಗ್ರಾಮಕ್ಕೆ ಹೋಗಿ ಅಲ್ಲಿಂದ ಸರಕಾರ ವತಿಯಿಂದ ವಿತರಿಸುವ ರ್ಯಾಷನ ಅಕ್ಕಿಯ ಪಾಕೇಟಗಳು ವಾಹನದಲ್ಲಿ ತುಂಬಿಕೊಂಡು ಯಾರಿಗೂ ಗೊತ್ತಾಗದಂತೆ ತರಬೇಕೆಂದು ಹಾಗು ಜೊತೆಯಲ್ಲಿ ಅವರ ಹತ್ತಿರ ಕೆಲಸ ಮಾಡುವ ಮಹ್ಮದ ಉಸ್ಮಾನ @ ಹುಸೇನ ಈತನಿಗೆ ಕರೆದುಕೊಂಡು ಹೋಗುವಂತೆ ನನಗೆ ತಿಳಿಸಿ ಹುಲಸೂರ ಗ್ರಾಮದ ಗುಂಡಪ್ಪಾ ತಂದೆ ನಾಗಪ್ಪಾ ನಂಜವಾಡೆ ಈತನ ಮೊ.ನಂ 9740868617 ನೇದು ಕೊಟ್ಟಿರುತ್ತಾನೆ. ಆದ್ದರಿಂದ ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿಯನ್ನು ಪಂಚರ ಸಮಕ್ಷಮದಲ್ಲಿ ವಾಹನ ಸಂಖ್ಯೆ ಎಮ್‍ಎಚ್-24ಎಯು-6455 ನೇದರಲ್ಲಿನ 50 ಕೆಜಿಯ ಸಾರ್ವಜನಿಕ

ವಿತರಣಾ ಪದ್ಧತಿಯ 54 ಅಕ್ಕಿ ಚೀಲಗಳು ಇದ್ದು, ಒಟ್ಟು 27 ಕ್ವಿಂಟಾಲ ಅಕ್ಕಿ ಇದ್ದು, ಅಂದಾಜು ಕಿಮ್ಮತ್ತು 81000/- ರೂಪಾಯಿಗಳು ಇರುತ್ತವೆ. ವಾಹನ ಸಂಖ್ಯೆ ಎಮ್‌ಎಚ್-24, ಎಯು-6455 ಅ.ಕಿ. ರೂ. 50,0000/- ರೂಪಾಯಿಗಳು ನೇದನ್ನು ಜಪ್ತ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಜನವಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 89/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ: 24/08/2022 ರಂದು ಪಿಎಸ್‌ಐ ರವರು ಠಾಣೆಯಲ್ಲಿದ್ದಾಗ ಜನವಾಡಾ ಗ್ರಾಮದ ಮಹಾದೇವ ಮಂದಿರದ ಕಟ್ಟೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಇಸ್ಪಿಟ್ ಜೂಜಾಟದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯವರೊಂದಿಗೆ ಹೋಗಿ ನೋಡಿದಾಗ ಮಹಾದೇವ ಮಂದಿರದ ಕಟ್ಟೆಯ ಮೇಲೆ ಮಂದಿರದ ಲೈಟಿನ ಬೆಳಕಿನಲ್ಲಿ ಸಾರ್ವಜನಿಕ ಸ್ಥಳದಲ್ಲಿ 5 ಜನರು ಗುಂಪಾಗಿ ಕುಳಿತು ಹಣ ಪಣಕ್ಕೆ ಕಟ್ಟಿ ಅಂದರ-ಬಾಹರ್ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು 1835 ಗಂಟೆಗೆ ಪಂಚರ ಸಮಕ್ಷಮ ಜೂಜಾಟದಲ್ಲಿ ತೊಡಗಿದವರಿಗೆ ಸಿಬ್ಬಂದಿಯವರ ಸಹಾಯದಿಂದ ಇಬ್ಬರಿಗೆ ಹಿಡಿದುಕೊಂಡಿದ್ದು 3 ಜನರು ಓಡಿ ಹೊಗಿರುತ್ತಾರೆ. ಹಿಡಿದುಕೊಂಡವರ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ 1] ಪ್ರಕಾಶ @ ಅಶೋಕ ತಂದೆ ರಘುನಾಥ ಮೇತ್ರೆ ಸಾ: ರಕ್ಯಾಳ ಸದ್ಯ ಜನವಾಡಾ 2] ಸಂಜುಕುಮಾರ ತಂದೆ ಪುಂಡಲೀಕ ಸಾಗರ ಸಾ: ಜನವಾಡಾ ಗ್ರಾಮ ಅಂತಾ ತಿಳಿಸಿದ್ದು ಓಡಿ ಹೊದವರ ಹೆಸರು ವಿಚಾರಿಸಲಾಗಿ 1] ಗೋವಿಂದ ಪವಾರ 2] ಬನ್ಸಿ ಮರಾಠ 3] ಸಿದ್ದಪ್ಪಾ ಗವಾರೆ ಎಲ್ಲರೂ ಸಾ: ಜನವಾಡಾ ಗ್ರಾಮ ಅಂತಾ ಗೊತ್ತಾಗಿರುತ್ತದೆ. ಆರೋಪಿತರಿಂದ ಇಸ್ಪಿಟ್ ಜೂಜಾಟಕ್ಕೆ ಬಳಸಿದ ಒಟ್ಟು ನಗದು ಹಣ 1950/- ರೂಪಾಯಿ ಮತ್ತು ಆರೋಪಿತರು ಜೂಜಾಟಕ್ಕೆ ಬಳಸಿದ 52 ಇಸ್ಪಿಟ್ ಎಲೆಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 101/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ:24-08-2022 ರಂದು ಸಾಯಂಕಾಲ 17.00 ಗಂಟೆಗೆ ಖಚಿತ ಬಾತ್ಮಿ ಬಂದಿದ್ದೆನೆಂದರೆ, ಚಿಟಗುಪ್ಪಾ ಪಟ್ಟಣದ ಮಡಿವಾಳೇಶ್ವರ ಗವಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಹಚ್ಚಿ ಅಂದರ ಬಾಹರ ಎಂಬ ಎಂಬ ನಸೀಬಿನ ಜೂಜಾಟ ಆಡುತ್ತಿದ್ದಾರೆ ಅಂತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ದಾಳಿ ಮಾಡಿ ಹಿಡಿಯಲು 05 ಜನರು ಸಿಕ್ಕಿದ್ದು, ಅವರ ಹೆಸರು ಮತ್ತು ವಿಚಾರಿಸಿ ಹೆಸರು ಮತ್ತು ವಿಳಾಸ ವಿಚಾರಿಸಿ ಅಂಗ ಪರಿಶೀಲನೆ ಮಾಡಲು 1] ರೇವಣಸಿದ್ದಯ್ಯಾ ತಂದೆ ಬಸಯ್ಯಾ ಹೀರೆಮಠ, ವಯ:55 ವರ್ಷ ಜಾ: ಲಿಂಗಾಯತ ಉ: ಖಾಸಗಿ ಶಿಕ್ಷಕ, ಸಾ/ ಬನಶಂಕರಿ ಕಾಲೋನಿ ಚಿಟಗುಪ್ಪಾ, ಈತನಿಂದ ನಗದು ಹಣ:4000/- ಸಿಕ್ಕಿದ್ದು, 2] ನಿಲಕಂಠ @ ಕಂಟೇಪ್ಪಾ ತಂದೆ ಶಿವಲಿಂಗಪ್ಪಾ ಹಳ್ಳಿಖೇಡೆ, ವಯ:52 ವರ್ಷ ಜಾ:ಲಿಂಗಾಯತ ಉ:ಒಕ್ಕಲುತನ ಸಾ/ ಬನಶಂಕರಿ ಕಾಲೋನಿ ಚಿಟಗುಪ್ಪಾ, ಈತನಿಂದ ನಗದು ಹಣ:200/- ಸಿಕ್ಕಿದ್ದು, 3] ಚನ್ನವೀರಯ್ಯಾ ತಂದೆ ಸಿದ್ರಾಮಯ್ಯಾ ಸ್ಥಾವರಮಠ, ವಯ:45 ವರ್ಷ, ಜಾ:ಸ್ವಾಮಿ, ಉ:ಕೂಲಿ ಕೆಲಸ ಸಾ/ ಬನಶಂಕರಿ ಕಾಲೋನಿ ಚಿಟಗುಪ್ಪಾ, ಈತನಿಂದ ನಗದು ಹಣ:4200/- ಸಿಕ್ಕಿದ್ದು, 4]ಚಾರಲಿ ತಂದೆ ದಶರಥ ಜೋಹೇಲ್, ವಯ:34 ವರ್ಷ, ಜಾ: ಕ್ರೀಶ್ಚಿಯನ್ ಉ:ಕೂಲಿ ಸಾ/ಬನಶಂಕರಿ ಕಾಲೋನಿ ಚಿಟಗುಪ್ಪಾ, ಈತನಿಂದ ನಗದು ಹಣ:870/- ಸಿಕ್ಕಿದ್ದು, 5]ಅಬ್ದುಲ ರಹಮಾನ ತಂದೆ ಅಭಾಸಅಲಿ ಸಸ್ತಾಪೂರೆ, ವಯ:35 ವರ್ಷ ಜಾ;ಮುಸ್ಲಿಂ, ಉ:ಕೂಲಿ, ಸಾ/ಜನತಾನಗರ ಚಿಟಗುಪ್ಪಾ, ಈತನಿಂದ ನಗದು ಹಣ:400/- ಸಿಕ್ಕಿದ್ದು, ಎಲ್ಲರ ಮಧ್ಯೆ ನಗದು ಹಣ 660/-ರೂ. ಹಾಗು 52 ಇಸ್ಪೀಟ್ ಎಲೆಗಳು ಸಿಕ್ಕಿದ್ದು, ಹೀಗೆ ಎಲ್ಲ ಸೇರಿ ಒಟ್ಟು ನಗದು ಹಣ 10330/-ರೂ. ಹಾಗು 52 ಇಸ್ಪೀಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.